5. ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೆ.ಐ.ಎ.ಡಿ.ಬಿ.ರವರ ಅಧಿಸೂಚನೆ ಹೊರಡಿಸಲಿದ್ದು ಎಕರೆ ಒಂದಕ್ಕೆ ಪರಿಹಾರ ನೀಡುವ ಮೊತ್ತ ಇನ್ನೂ ನಿಗಧಿಪಡಿಸಿಲ್ಲ.

ದ. ಕನ್ನಡ ಜಿಲ್ಲೆ ಲೋಕೋಪಯೋಗೆ ವಿಭಾಗದಲ್ಲಿ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಾಕಿ ಹಣ.

2309 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆ ಲೋಕೋಪಯೋಗಿ ವಿಭಾಗದಲ್ಲಿ ಗುತ್ತಿಗೆದಾರರಿಗೆ ಪಾವತಿ ಮಾಡಲು ಬಾಕಿ ಉಳಿದಿರುವ ಬಿಲ್ಲುಗಳ ಮೊತ್ತವೆಷ್ಟು? ಇದನ್ನು ಯಾವಾಗ ಪಾವತಿ ಮಾಡಲಾಗುವುದು?*

ಆ) *ಈ ವರ್ಷದಲ್ಲಿ ಕಿಲೋಮೀಟರಿಗೆ ಎಷ್ಟು ಮೆಂಟೆನೆನ್ಸ್ ಗ್ರಾಂಟನ್ನು ಒದಗಿಸಲಾಗಿದೆ? ಈ ಮೊತ್ತವನ್ನು ಕಡಿಮೆ ಏನಾದರೂ ಮಾಡಲಾಗಿದೆಯೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಇ) *ಗ್ಯಾಂಗ್‌ಮೆನ್‌ಗಳ ನಿಯೋಜನೆಯನ್ನು ಪುನರ್ ಪರಿಶೀಲಿಸಿ ಗ್ಯಾಂಗ್‌ಮೆನ್‌ಗಳನ್ನು ನೇಮಕ ಮಾಡುವ ಇರಾದೆ ಸರ್ಕಾರಕ್ಕಿದೆಯೇ? ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 312.57 ಲಕ್ಷ ರೂ.ಗಳ ಹಣ ಭರವಸೆ ಪತ್ರದ ಬಿಡುಗಡೆಯನ್ನಾಧರಿಸಿ ಪಾವತಿ ಮಾಡಲಾಗುವುದು.

ಆ) ಕಿ.ಮೀ. ವಾರು ಗ್ರಾಂಟನ್ನು ನೀಡಲಾಗುವುದಿಲ್ಲ. ರಸ್ತೆಯ ದುರಸ್ತಿ ಕಾಮಗಾರಿಗಳ ಆಧಾರಿತ ಅನುದಾನವನ್ನು ನೀಡಲಾಗುವುದು.

1996-97	340.07 ಲಕ್ಷ ರೂ.
1997-98	440.50 ಲಕ್ಷ ರೂ.

ಅನುದಾನ ಕಡಿಮೆಯಾಗಿಲ್ಲ.

ಇ) ಇಲ್ಲ.

ಆಳ ಸಮುದ್ರ ಮೀನುಗಾರಿಕೆ

2311 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಈ ಹಿಂದೆ ಸರ್ಕಾರ ಹಲವಾರು ಒಪ್ಪಂದಗಳನ್ನು ಆಳ ಸಮುದ್ರ ಮೀನುಗಾರಿಕೆಗಾಗಿ ಮಾಡಿಕೊಂಡಿದ್ದು ಇದರಿಂದ ಕರಾವಳಿಯ ಸಾಮಾನ್ಯ ಮೀನುಗಾರರಿಗೆ ಆದ ತೊಂದರೆಗಳು*

ಸರ್ಕಾರಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಇದನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ವಿದೇಶಿ ಮಾರುಕಟ್ಟೆಗೆ ರಫ್ತು ಮಾಡುವ ಹಿನ್ನೆಲೆಯಲ್ಲಿ ಉತ್ತಮ ಮೀನುಗಳನ್ನು ಮಾತ್ರ ಕ್ರೋಡಿಕರಿಸಲು ಮಿಕ್ಕುಳಿದ ಮೀನುಗಳನ್ನು ಸಮುದ್ರದಲ್ಲಿ ಬಿಸಾಡುವುದರಿಂದ ಮೀನುಗಳು ನಶಿಸಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಕೈಗೊಂಡ ಪರಿಹಾರಗಳೇನು?

ಶ್ರೀ ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಆ) ರಾಜ್ಯದ ಕರಾವಳಿಯಲ್ಲಿ ಆಳ ಸಮುದ್ರ ಮೀನುಗಾರಿಕೆಗೆ ವಿದೇಶಿ ನೌಕೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ವಿಷಯವು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರುತ್ತದೆ. ಇದರಿಂದ, ಕರಾವಳಿಯ ಸಾಮಾನ್ಯ ಮೀನುಗಾರರು ನೀಡಿರುವ ದೂರುಗಳ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ. ಇದರ ನಿಯಂತ್ರಣ ನಿವಾರಣೆ ಕೇಂದ್ರ ಸರ್ಕಾರದ ವ್ಯಾಪ್ತಿಯ ವಿಷಯವಾಗಿರುತ್ತದೆ. ಆದ್ದರಿಂದ ಈ ಬಗ್ಗೆ ರಾಜ್ಯ ಸರ್ಕಾರದಿಂದ ಯಾವುದೇ ಒಪ್ಪಂದಗಳನ್ನು ಮಾಡಿಕೊಂಡಿರುವುದಿಲ್ಲ.

ಆ) ಆಳ ಸಮುದ್ರ ಮೀನುಗಾರಿಕೆಯಲ್ಲಿ ಷರತ್ತುಗಳ ಪ್ರಕಾರ ಮೀನುಗಾರಿಕೆ ಮಾಡುತ್ತಿದ್ದು, ಕರಾವಳಿ ರಕ್ಷಣಾಪಡೆ ಹಾಗೊಂದು ವೇಳೆ ಕಾನೂನು ಉಲ್ಲಂಘನೆ ಮಾಡಿ ಮೀನುಗಾರಿಕೆ ಮಾಡಿದರೆ ಕ್ರಮವಿಡಲಾಗುತ್ತಿದೆ. ರಫ್ತು ಮಾಡುವಂತಹ ಮೀನುಗಳನ್ನು ಮಾತ್ರ ಹಿಡಿಯುತ್ತಿದ್ದು, ಇತರ ಮೀನುಗಳನ್ನು ಉಪಯೋಗಿಸುವುದಿಲ್ಲವೆಂಬ ದೂರುಗಳ ಬಗ್ಗೆ ತೀವ್ರ, ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದ್ದು, ಇದನ್ನು ನಿಯಂತ್ರಿಸಲು ಕೇಂದ್ರ ಸರ್ಕಾರವು ಅದರ ಕರಾವಳಿ ಪಡೆಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ಸದರಿ ಪಡೆಯವರ ಪ್ರಕಾರ ಸಣ್ಣ ಮೀನುಗಳನ್ನು ಹಿಡಿಯುತ್ತಿಲ್ಲವೆಂದು ತಿಳಿದು ಬಂದಿದೆ.

ಪುತ್ತೂರು ತಾಲ್ಲೂಕು ಕ್ಯೊಲ ಜಾನುವಾರು ಕೇಂದ್ರ

2312 - ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ತಾಲ್ಲೂಕು ಕ್ಯೊಲ ಜಾನುವಾರು ಕೇಂದ್ರಕ್ಕೆ ಸುಮಾರು 1400 ಎಕರೆ ಜಾಗದಲ್ಲಿ ಯಾವುದೇ ವ್ಯವಸ್ಥಿತ ಕೆಲಸಗಳು ನಡೆಯದೆ ಈ ಜಾಗವು ನಿರುಪಯೋಗವಾಗಿರುವುದರಿಂದ ಈ ಜಾಗದಲ್ಲಿ ಸರ್ಕಾರದವರು ಯಾವುದಾದರು ಕೆಲಸಗಳನ್ನು ಹಮ್ಮಿಕೊಂಡಿದ್ದಾರೆಯೇ?

ಆ) ಆ ಪ್ರದೇಶದಲ್ಲಿ ಯಾವುದೇ ಕೃಷಿ ವಿಶ್ವವಿದ್ಯಾಲಯಗಳಲ್ಲಿದೆ ಇದ್ದು ಈ ಜಾಗವು ಅದಕ್ಕೆ ಸೂಕ್ತ ಸ್ಥಳವಾಗಿರುವ ಹಿನ್ನೆಲೆಯಲ್ಲಿ ಇಲ್ಲಿ ಕೃಷಿ ವಿದ್ಯಾಲಯವನ್ನು ಆರಂಭಿಸುವ ಇರಾದೆ ಸರ್ಕಾರಕ್ಕೆ ಇದೆಯೇ?

7444 - 114